# ನೀರೇ ನೀರೇ...

ನಿರಿಗೆಗಳನೊದ್ದೊದ್ದು ಬಳುಕುತ್ತ ನಡಿವಾಕಿ
ಮೊಳಿಕ್ಯಾಗ ಬೆಳಕಾಗಿ ಉಸಿರನ್ನು ತುಂಬಾಕಿ
ಜೀವ ಜೀವರ ತಣಿಸಿ ಉಣಿಸಾಕಿ ಬೆಳೆಸಾಕಿ
ಚೆಂದುಳ್ಳಿ ಚೆಲುವಿ ನೀ ನೀರೇ ನೀರೇ....

ತಲಿಮ್ಯಾಗ ಕೈಯಾಗ ಸಂಸಾರ ಭಾರ
ನಿನ ಮಗಳು ನಾನೂನು ಕರುಣೆಯ ತೋರ
ಹುಕಿ ಬಂದು ಹರಿಬ್ಯಾಡ ನೀ ಹೀಂಗ ಮೊರಿಬ್ಯಾಡ
ನಾನೂನು ನಿನ್ಹಾಂಗ ನೀರೆ ನೀ ನೀರೇ....

ನನ್ನೊಡಲ ಒಡಿಬ್ಯಾಡ ಕುಡಿಗಳ ಮುರಿಬ್ಯಾಡ
ನಿನ ಲೀಲೆ ತಡಿಲಾರೆ ಸಾಕವ್ವ ತಾಯೇ...
ನಾನೊಂದು ತಾಯಿ ಮರಿಬ್ಯಾಡ ಮಾಯೀ
ಚೆಂದುಳ್ಳಿ ಚೆಲುವಿ ನೀ ನೀರೇ ನೀರೇ...

ಚಿಗುರು ಎಲಿಗಳು ಹಣ್ಣು ತೆನಿಗೊಂಚಲಾಗ್ಯಾವ
ಬೇರಿಳಿದ ಎದಿಮ್ಯಾಲ ಹರಿಬ್ಯಾಡ ನೀರೇ
ನಿನ ಸುಳಿಯ ಕಳ್ಳಾಟ ಮಳ್ಳಾಟದೊಳಗ
ಮಕ್ಕಳ ಮರಿಬ್ಯಾಡ ನೀರೇ ನೀ ನೀರೇ....

ನಿನ್ನಾಳನಳೆಯುವ ಅಳವಿಲ್ಲ ನನ್ನೊಳಗ
ಒಡ್ಡು ಒಡಕಲನೊಡೆದು ಹರಿಬ್ಯಾಡ ಮಾಯಿ
ಕೆರಿಹಳ್ಳ ತುಂಬಿಸು, ಹೊರಚೆಲ್ಲಿ ಹರಿಬ್ಯಾಡ
ಚೆಂದುಳ್ಳಿ ಚೆಲುವಿ ನೀ ನೀರೇ ನೀರೇ...

● **ಮಾರುತಿ ದಾಸಣ್ಣವರ**

# ಅನಿವಾರ್ಯ

ದಡ ಸೇರುವುದು
ಆಸೆಯಲ್ಲ ಅನಿವಾರ್ಯ
ನಡೆದು ಸಾಗುವುದು
ಜಾಣತನ ಆಳವಿಲ್ಲದಾಗ
ಬಿದ್ದವರಿಗೆ ಈಜು
ಕಲಿಸದಿರದು ಹೊಳೆ
ಹೊಳೆವ ಪಾತ್ರೆಗಳಂತೆ
ಜೀವನದಲ್ಲೂ ಹೊರೆ
ಕಡಿಮೆ ಏನಲ್ಲ
ಬೇರೆ ಬೇರೆ ಗಾತ್ರ
ಅವರವರಿಗೆ ಮಾತ್ರ
ನಡುವೆ ನಿಂತರೆ
ತಳ್ಳಬಹುದು ಎಳೆಯಬಹುದು
ತುಳಿದು ಮುಂದೆ
ಹೋಗಬಹುದು
ಮೂಕವಾಗಿ ಕುಳಿತವರಿದ್ದಾರೆ
ಆದರೆ ಎಚ್ಚರ!

ಇತರರದೇನು ಭರವಸೆ?
ಆಳ ಕುತ್ತಿಗೆಗೆ ತಲುಪದಿರಲಿ
ದೃಢ ಹೆಜ್ಜೆಗಳಿಂದ ನೀ
ತಲುಪಿದರೆ ಆ ದಡ
ಸಮಾಧಾನ
ನಿನಗೂ... ನನಗೂ!

● **ತಲಕಾಡು ಶ್ರೀನಿಧಿ**

